ಪಡೆದುಕೊಂಡಿದ್ದೇವೆ. ಆರ್ಥಿಯಿಂದ ಪರವಾನಿಗೆಯನ್ನು ಪಡೆದುಕೊಂಡಿದ್ದೇವೆ. ಅನಂತರ ನಾವು ಈವರೆಗೂ ಕೆಲವು ದೇಶಗಳಿಗೆ ಈ ಒಂದು ತೋಟಗಾರಿಕೆ ಮಾಲುಗಳನ್ನು ಎಕ್ಸ್‌ಪೋರ್ಟ್ ಮಾಡಲಿಕ್ಕೆ ಕ್ರಮ ತೆಗೆದುಕೊಂಡು ಮಾಡಿದ್ದೇವೆ. ಈಗ ತಾವು ಖಾಸಗಿ ರೈತರಿಗೂ ಕೂಡ ಕೊಡುತ್ತೀರಾ ಎಂದು ಕೇಳಿದ್ದೀರಿ. ಅವರೂ ಸಹ ಅವರ ಇಚ್ಛಾನುಸಾರ ಮಾಡಬಹುದು. ಅವರು ನಮ್ಮ ಸರ್ಕಾರವನ್ನೇ ಕೇಳಿ ಮಾಡಬೇಕಾದಂಥ ಅವಶ್ಯಕತೆ ಏನೂ ಇಲ್ಲ. ಸರ್ಕಾರ ಮಾಡುತ್ತದೆಯೇ ಎಂದು ಕೇಳಿದ್ದೀರಿ, ಸರ್ಕಾರ ಮಾಡಲಿಕ್ಕೆ ನಾವು ಎಲ್ಲಾ ಕ್ರಮವನ್ನು ತೆಗೆದುಕೊಂಡಿದ್ದೇವೆ. ಅದಕ್ಕೆ ಮೂಲಭೂತವಾದ ಬೇಕಾದಂಥ ಸೌಕರ್ಯಗಳನ್ನು ಕೂಡ ಇವೊತ್ತು ಮಾಡುವ ದಿಕ್ಕಿನಲ್ಲಿ ಬಿಜಾಪುರ್, ಅಥಣಿ, ಬಾಗಲಕೋಟೆನಲ್ಲಿ ಫ್ರೀ ಕೂಲಿಂಗ್ ಮತ್ತು ಕೋಲ್ಡ್ ಸ್ಟೋರೇಜ್ ಪೆಸಿಲಿಟೀಸನ್ನು ಮಾಡಲಿಕ್ಕೆ 112 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಹಾಗಾಗಿ ಇದನ್ನು ಖಾಸಗಿಯವರು ಮಾಡುವುದಾದರೆ, ಅವರಿಗೆ ನಮ್ಮ ಕಡೆಯಿಂದ ಯಾವ ಅಡಚಣೆಗಳು ಇಲ್ಲ.

ಶ್ರೀ ಎ.ಟಿ. ರಾಮಸ್ವಾಮಿ : ಈ ತೋಟಗಾರಿಕೆ ಉತ್ಪನ್ನಗಳನ್ನು ಎಷ್ಟು ಪ್ರಮಾಣದಲ್ಲಿ ರಫ್ತು ಮಾಡಲಿಕ್ಕೆ ನಮ್ಮ ರಾಜ್ಯದಲ್ಲಿ ಅವಕಾಶ ಇದೆ? ಇದರ ಜೊತೆಗೆ ತೋಟಗಾರಿಕೆ ಉತ್ಪನ್ನಗಳ ರಫ್ತಿಗೆ ಉತ್ತೇಜನ ಆಗಲಿ ಎಂದು ಶೀತಲ ಸಾರಿಗೆ ವಾಹನಗಳನ್ನು ತರಿಸಲಿಕ್ಕೆ ಕ್ರಮ ಕೈಗೊಂಡಿದ್ದೇವೆಂದು ತಿಳಿಸಿದ್ದೀರಿ. ಎಷ್ಟು ಶೀತಲ ಸಾರಿಗೆ ವಾಹನಗಳನ್ನು ಖರೀದಿಸಲಿಕ್ಕೆ 1993-94ನೇ ಸಾಲಿನಲ್ಲಿ ಕಾರ್ಯಕ್ರಮ ಹಾಕಿಕೊಂಡಿದ್ದೀರಿ?

ಶ್ರೀ ಎ. ಕೃಷ್ಣಪ್ಪ : ಒಂದು ನೂರು ಶೀತಲ ಗೃಹಗಳನ್ನು ಈಗಾಗಲೇ ಹಾಸನ ಜಿಲ್ಲೆಯನ್ನು ಸೇರಿ, ಮಾಡಬೇಕೆಂದು ಈ ವರ್ಷದಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಬಿಜಾಪುರ್, ಅಥಣಿ, ಬಾಗಲಕೋಟೆಯಲ್ಲಿ ಫ್ರೀ ಕೂಲಿಂಗ್ ಮತ್ತು ಕೋಲ್ಡ್ ಸ್ಟೋರೇಜ್ ಮಾಡಲಿಕ್ಕೆ ಅನುಮತಿಯನ್ನು ನಾವು ಈಗಾಗಲೇ ಕೊಟ್ಟಿದ್ದೇವೆ. ದುಡ್ಡು ಮಂಜೂರಾತಿ ಕೂಡ ಕೊಟ್ಟಿದ್ದೇವೆ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಮಂತ್ರಿಗಳು ಶೀತಲ ಗೃಹಗಳ ಬಗ್ಗೆ ಹೇಳಿದರು. ಶೀತಲ ಸಾರಿಗೆ ವಾಹನ ಕೊಡುತ್ತೇವೆಂದು ಹೇಳಿದ್ದೀರಿ, ಎಷ್ಟು ಕೊಂಡು ಕೊಳ್ಳುತ್ತೀರಿ ಎಂದು ತಿಳಿಸಬೇಕು.

ಶ್ರೀ ಎ. ಕೃಷ್ಣಪ್ಪ : ಪ್ರಪೋಸಲ್ ಭಾರತ ಸರ್ಕಾರದ ಕಡೆ ಇದೆ, ಅವರು ಎಷ್ಟು ಮಂಜೂರಾತಿ ಕೊಡುತ್ತಾರೋ ಅಷ್ಟು ನಾವು ರಾಜ್ಯ ಸರ್ಕಾರದವರು ಜಾರಿ ಮಾಡುತ್ತೇವೆ.

1993-94ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ತುಗಳಿಗೆ ಹಣ ವಿತರಣೆ.

11- ಶ್ರೀ ಗುರುಪಾದಪ್ಪ, ನಾಗಮಾರಪಲ್ಲಿ (ಔರದ್): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. 1993-94ನೇ ಸಾಲಿನಲ್ಲಿ (ಡಿಸೆಂಬರ್ 31ರವರೆಗೆ) ರಾಜ್ಯದ ವಿವಿಧ ಜಿಲ್ಲಾ ಪರಿಷತ್ತುಗಳಿಗೆ ಬಿಡುಗಡೆ ಮಾಡಲಾದ ಹಣದ ಪ್ರಮಾಣವೆಷ್ಟು? ಹಾಗೂ ಅದೇ ಸಾಲಿನಲ್ಲಿ ಮೀಸಲಾಗಿಟ್ಟಿದ್ದ ಹಣದ ಪ್ರಮಾಣವೆಷ್ಟು? (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು).

ಆ. ಕಳೆದ ವರ್ಷ ಜನವರಿ 1993 ರಿಂದ ಡಿಸೆಂಬರ್ 31ರವರೆಗೆ ಬೀದರ್ ಜಿಲ್ಲಾ ಪರಿಷತ್ತಿನಲ್ಲಿ ಅಭಿವೃದ್ಧಿ ಕಾರ್ಯಗಳಿಗಾಗಿ ಖರ್ಚು ಮಾಡಿದ ಹಣವೆಷ್ಟು? (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು)

ಇ. ಆದೇ ಅವಧಿಯಲ್ಲಿ ಮೀಸಲಾಗಿಟ್ಟಿದ್ದ ಹಣದ ಪ್ರಮಾಣವೆಷ್ಟು? ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು.

ಈ. ಬೀದರ್ ಜಿಲ್ಲಾ ಪರಿಷತ್ತಿಗೆ ಸರಿಯಾಗಿ ಹಣ ಬಿಡುಗಡೆಯಾಗದೇ ಇರುವುದರಿಂದ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳಲ್ಲಿ ತೀವ್ರವಾದ ಹಿನ್ನಡೆಯುಂಟಾಗಿರುವುದನ್ನು ಸರ್ಕಾರ ಒಪ್ಪುವುದೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್) : ಅ) 1993-94ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿಗೆ ಆಯವ್ಯಯದಲ್ಲಿ ಮೀಸಲಾಗಿಟ್ಟ ಹಣದ ರೂ.1857 ಕೋಟಿಗಳು, ಈ ಸಾಲಿನಲ್ಲಿ ಡಿಸೆಂಬರ್ 93ರವರೆಗೆ ವಿವಿಧ ಜಿಲ್ಲಾ ಪರಿಷತ್ತುಗಳಿಗೆ ಬಿಡುಗಡೆ ಮಾಡಲಾದ ಹಣ ರೂ.1193 ಕೋಟಿಗಳು (ಜಿಲ್ಲಾವಾರು ವಿವರ ಅನುಬಂಧ-1 ರಲ್ಲಿ) ನೀಡಲಾಗಿದೆ.)

ಆ. ಬೀದರ್ ಜಿಲ್ಲಾ ಪಂಚಾಯತ್ ಅಭಿವೃದ್ಧಿ ಕಾರ್ಯಗಳಿಗಾಗಿ ಜನವರಿ 1993ರಿಂದ ನವೆಂಬರ್ 1993ರವರೆಗೆ ಖರ್ಚು ಮಾಡಿದ ಹಣ ರೂ. 9.57 ಕೋಟಿಗಳು (ತಾಲ್ಲೂಕುವಾರು ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ).

ಇ. ಜಿಲ್ಲಾ ಪಂಚಾಯತಿಯ ಆಯವ್ಯಯದಲ್ಲಿ ತಾಲ್ಲೂಕುವಾರು ಹಣ ಮೀಸಲಾತಿ ಮಾಡಿರುವುದಿಲ್ಲ ಕಾರ್ಯಕ್ರಮಗಳಿನುಸಾರವಾಗಿ ಹಣ ಬಿಡುಗಡೆ ಮಾಡಲಾಗುವುದು.

ಈ. ಇಲ್ಲ.

ಅನುಬಂಧ-1

1993-94ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿಗಳಿಗೆ ನಿಗಧಿಪಡಿಸಲಾದ ಹಾಗೂ ಬಿಡುಗಡೆ ಮಾಡಿದ ವಿವರಗಳ ಜಿಲ್ಲಾವಾರು ತಃಖ್ತೆ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಜಿಲ್ಲಾಪರಿಷತ್ ಹೆಸರು	1993-94ರಲ್ಲಿ ಸರ್ಕಾರ ದಿಂದ ನಿಗಧಿತ ಮೊತ್ತ	1993ರ ಡಿಸೆಂಬರ್ ಬಿಡುಗಡೆ ಮಾಡಿದ ಮೊತ್ತ 31ರವರೆಗೆ
1.	ಬೆಂಗಳೂರು (ಗ್ರಾ)	8196.15	5047.94
2.	ಚಿತ್ರದುರ್ಗ	11020.20	6820.06
3.	ಕೋಲಾರ	11192.44	7781.01
4.	ಶಿವಮೊಗ್ಗ	9262.36	6190.60
5.	ತುಮಕೂರು	12359.88	6425.93
6.	ಮೈಸೂರು	12813.50	8453.47
7.	ಚಿಕ್ಕಮಗಳೂರು	6381.29	4317.39
8.	ದಕ್ಷಿಣ ಕನ್ನಡ (ಮಂಗಳೂರು)	11509.84	7202.41
9.	ಹಾಸನ	8070.54	4992.49
10.	ಕೊಡಗು	3399.42	2368.53
11.	ಮಂಡ್ಯ	7887.93	5234.45
12.	ಬೆಳಗಾವಿ	14265.85	9431.01
13.	ಬಿಜಾಪುರ	12905.72	8075.74
14.	ಧಾರವಾಡ	14376.23	9615.14

15. ಉತ್ತರ ಕನ್ನಡ	7385.27	5024.27
16. ಗುಲ್ಬರ್ಗಾ	11587.94	6855.18
17. ಬಳ್ಳಾರಿ	7894.47	5378.28
18. ಬೀದರ್	6241.38	3906.92
19. ರಾಯಚೂರು	8978.28	5165.55
	185729.00	119298.00
	(1857 ಕೋಟಿ ರೂ)	(1193 ಕೋಟಿ ರೂ)

ಟಿಪ್ಪಣಿ : ಈ ಮೊತ್ತವು ಆರ್ಥಿಕ ಇಲಾಖೆ ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಗಳು ಬಿಡುಗಡೆ ಮಾಡಿದ ಹಣವನ್ನು ಮಾತ್ರ ತೋರಿಸುವುದು ಹಾಗೂ ಬೇರೇ ಸಚಿವಾಲಯದ ಇಲಾಖೆಗಳು ಕೇಂದ್ರ ಪುರಸ್ಕೃತ ಹಾಗೂ ಕೇಂದ್ರ ವಲಯದ ಯೋಜನೆಗಳಿಗೆ ಮಾಡಿದ ಬಿಡುಗಡೆಯನ್ನು ಒಳಗೊಂಡಿರುವುದಿಲ್ಲ.

ಅನುಬಂಧ-2

ಬೀದರ್ ಜಿಲ್ಲಾ ಪಂಚಾಯತಿಯಲ್ಲಿ ಅಭಿವೃದ್ಧಿ ಕಾರ್ಯಗಳಿಗಾಗಿ ಜನವರಿ 1993ರಿಂದ ನವೆಂಬರ್ 1993ರವರೆಗೆ ಖರ್ಚು ಮಾಡಿದ ಮೊತ್ತಗಳ ತಾಲ್ಲೂಕುವಾರು ವಿವರಗಳ ತಃಖ್ತೆ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ತಾಲ್ಲೂಕು ಹೆಸರು	ಅಭಿವೃದ್ಧಿ ಕಾರ್ಯಕ್ಕಾಗಿ ಕೈಗೊಂಡ ವೆಚ್ಚ
1.	ಬೀದರ್	204.90
2.	ಔರಾದ್	179.08
3.	ಬಾಲ್ಕಿ	188.94
4.	ಬಸವ ಕಲ್ಯಾಣ	209.09
5.	ಹುಮನಾಬಾದ್	175.14
	ಒಟ್ಟು.	**957.15**
		(9.57 ಕೋಟಿ ರೂ)

ಶ್ರೀ ಗುರುಪಾದಪ್ಪ, ನಾಗಮಾರಪಲ್ಲಿ : ಅಧ್ಯಕ್ಷರೆ, ಈ ಜಿಲ್ಲಾ ಪರಿಷತ್ತಿಗೆ ಹಣವನ್ನು 1993-94ನೇ ಸಾಲಿಗೆ ಎಷ್ಟು ಕೊಟ್ಟಿದ್ದೀರಿ ಎಂದು ಕೇಳಿದರೆ, ಹಣ ಇರತಕ್ಕದ್ದು 1,857 ಕೋಟಿ, ಅದರಲ್ಲಿ 1,190 ಕೊಟ್ಟಿರುವುದು. 664 ಲಕ್ಷಗಳು ಇನ್ನೂ ಹಾಗೆ ಇದೆ. ಇನ್ನು ಎರಡು ತಿಂಗಳು ಇದೆ. ಇಷ್ಟು ಹಣ ಯಾವಾಗ ಖರ್ಚು ಮಾಡುತ್ತಾರೆ? ಇವರು ಬರೀ ಕಾಗದದಲ್ಲಿ ಬಿಡುಗಡೆ ಮಾಡಿದ್ದಾರೋ ಅಥವಾ ಪ್ರಗತಿರೂಪದಲ್ಲಿ ಆಗಿದೆಯೋ? ಇದೆಲ್ಲಾ ಯಾವಾಗ ಕಂಪ್ಲೀಟ್ ಆಗಬೇಕು? ಬೀದರ್‌ನಲ್ಲಿ ಎಷ್ಟು ಹಣ ಬಿಡುಗಡೆ ಮಾಡಿದ್ದೀರಾ ಅಂದರೆ 9.57 ಎಂದು ಹೇಳುತ್ತಾರೆ. ಇಲ್ಲಿ ಅಂಕಿಅಂಶಗಳನ್ನು ನೋಡಿದರೆ ಅವರು ಜಿಲ್ಲಾವಾರು ಕೊಟ್ಟಿದ್ದಾರೆ, 6,241.38 ಎಂದು ಹೇಳುತ್ತಾರೆ ಅದರಲ್ಲಿ ಕೊಟ್ಟಿರುವುದು, 3,906 ಉಳಿದಿದ್ದು 2,334.55

ಲಕ್ಷ ರೂಪಾಯಿ. ಈಗ ಇದನ್ನು ನೋಡಿದರೆ ಅರ್ಧಕ್ಕೆ ಅರ್ಧ ಹಣ ಉಳಿದಿದೆ. ಈ ರೀತಿ ಆದರೆ ಯಾವಾಗ ಈ ಡೆವಲಪ್ಮೆಂಟ್ ಆಗಬೇಕು? ಇವರಿಗೆ ಎಂಟು ತಿಂಗಳಲ್ಲಿ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಎರಡು ತಿಂಗಳಲ್ಲಿ ಮಾಡಲಿಕ್ಕೆ ಸಾಧ್ಯವಾಗುತ್ತದೆಯೇ?

ಬೀದರ್ ಜಿಲ್ಲಾ ಪರಿಷತ್ತಿಗೆ ಸರಿಯಾಗಿ ಹಣ ಬಿಡುಗಡೆಯಾಗದೇ ಇರುವುದರಿಂದ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳಲ್ಲಿ ತೀವ್ರವಾದ ಹಿನ್ನೆಡೆಯುಂಟಾಗಿರುವುದನ್ನು ಸರ್ಕಾರ ಒಪ್ಪುವುದೇ ಎಂದು ಕೇಳಿದ ಪ್ರಶ್ನೆಗೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದೀರಿ. ಹಾಗಿದ್ದರೆ ಅಭಿವೃದ್ಧಿ ನಿಂತಿಲ್ಲ ಎಂದು ಹೇಳಿ. ಇವತ್ತು ಅಲ್ಲಿ ಕೊಳವೆ ಬಾವಿ ರಿಪೇರಿಗೆ ಹಣ ಇಲ್ಲ. ವಾಟರ್‌ಸಪ್ಲೈಗೆ ಹಣ ಇಲ್ಲ. ಮೈನರ್ ಇರಿಗೇಷನ್ ಟ್ಯಾಂಕ್ ರಿಪೇರಿಗೆ ಹಣ ಇಲ್ಲ. ಮಿಲಿಯನ್ ವೆಲ್ ಸ್ಕೀಮ್ನಲ್ಲಿ ಹಣ ಇಲ್ಲ. ಒಂದಕ್ಕೂ ಹಣ ಇಲ್ಲ. ಇವತ್ತು ಜಿಲ್ಲಾ ಪರಿಷತ್ತಿಗೆ ಸಂಬಳ ಕೊಡುವುದಕ್ಕೆ ಹಣ ಇಲ್ಲ. ನಮ್ಮ ತಾಲ್ಲೂಕು ಸಮಿತಿ ಸಭೆಯಲ್ಲಿ ಕೇಳಿದರೆ ನಮ್ಮಲ್ಲಿ ಹಣ ಇಲ್ಲ ಎಂದು ಓಪನ್ನಾಗಿ ಹೇಳುತ್ತಾರೆ. ಯಾವುದೇ ಕೆಲಸ ತೆಗೆದುಕೊಳ್ಳಬೇಡಿ ಎಂದು ಜಿಲ್ಲಾ ಪರಿಷತ್ತಿನವರಿಗೆ ಹೇಳಿದ್ದಾರೆಂದು ಹೇಳುತ್ತಾರೆ.

ಶ್ರೀ ಎಂ.ವೈ. ಘೋರ್ಪಡೆ : ಸಭಾಧ್ಯಕ್ಷರೇ, ನಾವು ಬಹಳ ಕಷ್ಟಪಟ್ಟು ಅಂಕಿಸಂಖ್ಯೆಗಳನ್ನು ಸಂಗ್ರಹಿಸಿ ಸಮಗ್ರ ಉತ್ತರವನ್ನು ಕೊಡುವ ಪ್ರಯತ್ನ ಮಾಡಿದ್ದೇವೆ. ನಾವು 1993-94ನೇ ಸಾಲಿನಲ್ಲಿ ಜಿಲ್ಲಾಪರಿಷತ್ ಸೆಕ್ಟಾರ್‌ಗೆ 1,857ಕೋಟಿ ರೂಪಾಯಿಗಳನ್ನು ಕೊಡಬೇಕು.

ಈ 1,857 ಕೋಟಿಯಲ್ಲಿ ಪ್ಲಾನ್ 771 ಹಾಗೂ ನಾನ್‌ಪ್ಲಾನ್ 1086 ಕೋಟಿ ರೂಪಾಯಿಗಳು ಬರುತ್ತದೆ. ಈ 1,857 ಕೋಟಿಗಳಲ್ಲಿ ಡಿಸೆಂಬರ್ ಅಂತ್ಯದವರೆಗೆ 1193 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ. ಎಂದರೆ ಜನವರಿ, ಫೆಬ್ರವರಿ, ಮಾರ್ಚ್ ತಿಂಗಳು ಇದೆ. ಇದನ್ನು ಗಮನಿಸಿದಾಗ ಇದು ತೀರಾ ಕಡಿಮೆ ಎಂದು ಹೇಳುವುದು ಕಷ್ಟ. ಇದರಲ್ಲಿ ಬೀದಗೆ 9.57 ಕೋಟಿಗಳು ರೂಪಾಯಿ ಇದ್ದು ಯಾವ ಯಾವ ತಾಲ್ಲೂಕುಗಳಿಗೆ ಎಷ್ಟೆಷ್ಟು ಕೊಟ್ಟಿದ್ದೇವೆಂಬ ವಿವರವನ್ನು ಕೊಟ್ಟಿದ್ದೇವೆ. ತಾವು ಜನವರಿಯಿಂದ ಡಿಸೆಂಬರ್‌ವರೆಗೆ ಮಾಹಿತಿ ಕೇಳಿದ್ದೀರಿ. ವರ್ಷಾಂತ್ಯ ಮಾರ್ಚಿನವರೆಗೆ ಇರುವುದರಿಂದ ಇದನ್ನು ಹೇಳುವುದಕ್ಕೆ ಕಷ್ಟವಾಗುತ್ತದೆ. ಒಟ್ಟಿನಲ್ಲಿ ಹೇಳಬೇಕೆಂದರೆ ತಾವು ಕೇಳಿದ ಅವಧಿಯಲ್ಲಿ 12 ಕೋಟಿ ರೂಪಾಯಿಗಳನ್ನು ಬೀದರ್ಗೆ ಕೊಟ್ಟಿದ್ದೇವೆ. ಅದರಲ್ಲಿ 9.57 ಕೋಟಿ ಖರ್ಚು ಮಾಡುವುದಕ್ಕೆ ಸಾಧ್ಯವಾಗಿದೆ. ಅದು ಕಡಿಮೆಯೇ ಜಾಸ್ತಿಯೇ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಅದು ದೊಡ್ಡ ವಾದ ಆಗುತ್ತದೆ. ಆದರೆ ಬೀದರ್ ಜನಸಂಖ್ಯೆ ಗಮನದಲ್ಲಿಟ್ಟುಕೊಂಡು ರಾಜ್ಯದ ಜನಸಂಖ್ಯೆಗೆ ಹೋಲಿಸಿದರೆ 1193 ಕೋಟಿ ರೂಪಾಯಿಗಳನ್ನು ಏನು ಬಿಡುಗಡೆ ಮಾಡಿದ್ದೇವೆ ಅದನ್ನು ಜನಸಂಖ್ಯೆಗೆ ಹೋಲಿಸಿದರೆ ಬೀದರ್ ಜಿಲ್ಲೆಯಲ್ಲಿ ಅನ್ಯಾಯ ಆಗಿದ್ದುದು ಕಂಡುಬರುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : 1857 ಕೋಟಿಯಲ್ಲಿ 1193 ಕೋಟಿ ರೂಪಾಯಿಗಳನ್ನು ಡಿಸೆಂಬರ್ ಅಂತ್ಯದವರೆಗೆ ಕೊಟ್ಟಿದ್ದೀರಿ. ಮಿಕ್ಕಿದ್ದು ಕೊಟ್ಟಿಲ್ಲ. ಇದರಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿವೆ.

ಆದರೆ ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದೀರಿ.

ಇವತ್ತು ರಿಪೇರಿ ಕೆಲಸಗಳು ಏಕೆ ಆಗುತ್ತಿಲ್ಲ?

ಶ್ರೀ ಎಂ.ವೈ. ಘೋರ್ಪಡೆ : ಅಂಕಿಸಂಖ್ಯೆ ಏನಿದೆ ಅದನ್ನು ಹೇಳಬಲ್ಲೆ. ತಮ್ಮ ಅಭಿಪ್ರಾಯದ ಪ್ರಕಾರ ಇನ್ನೂ ಜಾಸ್ತಿ ಕೆಲಸ ಕೊಡಬೇಕು, ಒಳ್ಳೆಯ ಕೆಲಸ ಆಗಬೇಕು ಎಂದು ಹೇಳಿದರೆ...

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಹಣ ಇಲ್ಲ, ಹಣ ಕೊಡದೆ ಕೆಲಸ ಹೇಗೆ ಆಗುತ್ತದೆ?

(ಗೊಂದಲ)

ಅಧ್ಯಕ್ಷರು : ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ.

ಶ್ರೀ ಸಿ. ಬೈರೇಗೌಡ : ಇದು ಬಹಳ ಸರಳ ಇದೆ. ಬಡ್ಜೆಟ್ ಪ್ರಾವಿಷನ್ ಎಷ್ಟು? ಇದುವರೆಗೆ ರಿಲೀಸ್ ಆಗಿರತಕ್ಕದ್ದು ಎಷ್ಟು ಎಂದು ಹೇಳಬೇಕು. ಆಗ ಸಮಸ್ಯೆ ಉದ್ಭವವಾಗುವುದಿಲ್ಲ.

Sri. M.Y. Ghorpade : I have given the complete and correct answer. The question was, how much money released. I have answered that it is Rs. 9.57 crores.

ಬೀದರ್‌ಗೆ 9.57 ಕೋಟಿ ಎಂದು ಹೇಳಿದ್ದೇನೆ. ಡಿಸೆಂಬರ್ ಕೊನೆಯವರೆಗೆ ಒಟ್ಟಾರೆ 1193 ಕೋಟಿ ಬಿಡುಗಡೆ ಆಗಿದೆ. ಮಾರ್ಚ್ ಕೊನೆಯವರೆಗೆ ಲೆಕ್ಕ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಫೆಬ್ರವರಿ ಒಳಗೆ ಪೂರ್ಣ ಹಣ ಬಿಡುಗಡೆ ಮಾಡುತ್ತೀರಾ?

Sri. M.Y. Ghorpade : Whatever is possible we will do. We are aware that Bidar is a backward district and backward area. We shall not neglect it. We shall release money.

ಗುಲ್ಬರ್ಗಾ ಜಿಲ್ಲೆಯಲ್ಲಿ ರೈತರಿಗೆ ಬೆಳೆ ಪರಿಹಾರ

177-ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿ ಬೆಳೆ ನಾಶವಾಗಿರುವುದರಿಂದ ಪರಿಹಾರಧನ ಮಂಜೂರು ಮಾಡಿ ಕೆಲವು ರೈತರಿಗೆ ವಿತರಣೆ ಮಾಡಿ ಕೆಲವರಿಗೆ ವಿತರಣೆ ಮಾಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈಗಲಾದರೂ ಸಹ ಮಂಜೂರಾಗಿರುವ ಪರಿಹಾರ ಧನವನ್ನು ಕೂಡಲೇ ವಿತರಣೆ ಮಾಡಲು ವ್ಯವಸ್ಥೆ ಮಾಡಿ ರೈತರಿಗೆ ಅನುಕೂಲ ಮಾಡಿ ಕೊಡಲಾಗುವುದೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):

ಅ) ಬಂದಿರುತ್ತದೆ.

ಆ) ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿ ಬೆಳೆ ನಾಶವಾಗಿದ್ದಕ್ಕೆ ಪರಿಹಾರವಾಗಿ ಒಟ್ಟು 9.75 ಕೋಟಿ ರೂ.ಗಳನ್ನು ಮಂಜೂರು ಮಾಡಿದ್ದು ಅದರಲ್ಲಿ 7.6733 ಕೋಟಿ ರೂ.ಗಳು ಬಿಡುಗಡೆಯಾಗಿದ್ದು ಪೂರ್ಣ ವಿತರಣೆಯಾಗಿರುತ್ತದೆ. ಉಳಿದ 2.0767 ಕೋಟಿ ರೂ.ಗಳನ್ನು ಅತೀ ಶೀಘ್ರವಾಗಿ ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಮಾನ್ಯ ಅಧ್ಯಕ್ಷರೇ, ನನ್ನ ಎರಡನೆಯ ಪ್ರಶ್ನೆಗೆ ಉತ್ತರವಾಗಿ ಒಟ್ಟು 9.75 ಕೋಟಿ ಮಂಜೂರು ಮಾಡಿದ್ದು 7.67 ಕೋಟಿ ಬಿಡುಗಡೆ ಮಾಡಲಾಗಿದ್ದು, ಉಳಿದ 2.07 ಕೋಟಿ ರೂಪಾಯಿಗಳನ್ನು ಶೀಘ್ರವಾಗಿ ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದಿದ್ದಾರೆ. ಮಾನ್ಯ ಅಧ್ಯಕ್ಷರೇ ನಾವು ಶಾಸಕರು ನಮ್ಮ ಕ್ಷೇತ್ರದಲ್ಲಿರತಕ್ಕ ಗ್ರಾಮಗಳಿಗೆ ಭೇಟಿ ನೀಡಿದಾಗ ಪರಿಹಾರಧನ